ಅ) ತಡವಾಗಿ ಪಾವತಿ ಮಾಡುವ ಎಲ್ಲಾ ವರ್ಗದ ವಿದ್ಯುಚ್ಛಕ್ತಿ ಬಳಕೆದಾರರಿಗೂ ತಾರತಮ್ಯವಿಲ್ಲದೆ ಬಡ್ಡಿಯನ್ನು ವಿಧಿಸಲಾಗುತ್ತಿದೆ. ಇದರ ಜೊತೆಗೆ ನೀರಾವರಿ ಪಂಪುಸೆಟ್ಟುಗಳು ಬಳಕೆದಾರರಿಗೆ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಟ್ಯಾರಿಫ್ ದರದಲ್ಲಿ ಸಾಕಷ್ಟು ರಿಯಾಯತಿಯನ್ನು ನೀಡುತ್ತಿದೆ.

ಆ) ಇಲ್ಲ.

ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯೂರಿನಲ್ಲಿ ಕೆ.ಇ.ಬಿ.ಯ ಉಪವಿದ್ಯುತ್ ಕೇಂದ್ರ ಸ್ಥಾಪನೆ ಕುರಿತು

2795 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯೂರಿನಲ್ಲಿ ಕೆ.ಇ.ಬಿ.ಯ ಉಪವಿದ್ಯುತ್ ಕೇಂದ್ರದ ಸ್ಥಾಪನಾ ಕೆಲಸಗಳು ತಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವಾಗ ಈ ಎರಡು ಉಪ-ವಿದ್ಯುತ್ ಕೇಂದ್ರಗಳ ಕೆಲಸಗಳನ್ನು ಪೂರ್ಣಗೊಳಿಸುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಕಳ್ಳಂಬೆಳ್ಳದಲ್ಲಿ ಉಪ ವಿದ್ಯುತ್ ಕೇಂದ್ರದ ಸ್ಥಾಪನಾ ಕೆಲಸ ಮುಗಿಸಲು ತಡವಾಗಿರುವುದಕ್ಕೆ ಮುಖ್ಯ ಕಾರಣ ಸರಿಯಾದ ಗುತ್ತಿಗೆದಾರರು ಸಿಗದಿರುವುದು. ಹುಳಿಯೂರಿನಲ್ಲಿ ಉಪ ವಿದ್ಯುತ್ ಕೇಂದ್ರವನ್ನು ಮೊದಲೇ ಪ್ರಾರಂಭಗೊಳಿಸದಿರಲು ಕಾರಣ ಇದಕ್ಕೆ ಬೇಕಾದ ಜಮೀನು ಸಿಗದೇ ಇರುವುದು.

ಆ) ಈಗ ಕಳ್ಳಂಬೆಳ್ಳದ ಉಪ-ವಿದ್ಯುತ್ ಕೇಂದ್ರದ ಕೆಲಸವನ್ನು ಹೊಸ ಗುತ್ತಿಗೆದಾರರಿಗೆ ವಹಿಸಲಾಗಿದೆ. ಹಾಗೂ ಈ ಕೆಲಸವನ್ನು 1991-92 ಅಂತ್ಯದೊಳಗೆ ಮುಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹುಳಿಯೂರು ಉಪ ವಿದ್ಯುತ್ ಕೇಂದ್ರಕ್ಕೆ ಬೇಕಾದ ಜಮೀನನ್ನು ಈಗ ಸ್ವಾಧೀನಪಡಿಸಿಕೊಂಡಿದ್ದು, ಈ ನಿರ್ಮಾಣ ಕೆಲಸಗಳನ್ನು 1992-93ನೇ ಸಾಲಿನಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ.

ದೈಹಿಕ ಶಿಕ್ಷಕರ ಕೊರತೆ ಉಂಟಾಗಿರುವ ಬಗ್ಗೆ

2803 - ಶ್ರೀ ನಾರಾಯಣರಾವ್ ಮನಳ್ಳಿ (ಬೀದರ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಲವಾರು ಶಾಲೆಗಳಲ್ಲಿ ದೈಹಿಕ ಶಿಕ್ಷಕರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಇದೆ.